**ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ, ಜೇವರ್ಗಿ**

**ಸಿಸಿ ನಂ.195/2020**

**ಚಾಸಾ-1/ಪಿಡಬ್ಲೂ-3**

| | |
|---|---|
| **ಹೆಸರು** | ಪುಲ್ಲಯ್ಯ |
| **ತಂದೆ ಹೆಸರು** | ಮಾನಸಿಂಗ |
| **ವಯಸ್ಸು** | 59 ವರ್ಷಗಳು |
| **ಉದ್ಯೋಗ** | ಪಿಐ |
| **ವಾಸ ಸ್ಥಳ** | ಸಾಗರ |

**ದಿನಾಂಕ 01.07.2025 ರಂದು ಸಾಕ್ಷಿಯನ್ನು video conference ಮುಖಾಂತರ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ.**

2019 ರಿಂದ ಏಪ್ರಿಲ್-2020 ರವರೆಗೆ ಯಡ್ರಾಮಿ ಪೊಲೀಸ ಠಾಣೆಯಲ್ಲಿ ಪಿ.ಎಸ.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 25.05.2019 ರಂದು ಬೆಳಿಗ್ಗೆ 8.15 ಗಂಟೆಗೆ ನಾನು ಠಾಣೆಯಲ್ಲಿದ್ದಾಗ ಶಹಾಪೂರ ಕಡೆಯಿಂದ ನಾಗರಾಣಿ ಕಡೆಗೆ ಅಕ್ರಮವಾಗಿ ಟಿಪ್ಪರನಲ್ಲಿ ಮರಳು ಸಾಗಾಟ ಮಾಡುತ್ತಿದ್ದಾರೆ ಎಂದು ತುಂಬುತ್ತಿದ್ದಾರೆ ಎಂದು ಮಾಹಿತಿ ಬಂತು. ಸದರಿ ಮಾಹಿತಿಯನ್ನು ಸಿಬ್ಬಂದಿಗೆ ತಿಳಿಸಿ ಪಂಚರನ್ನಾಗಿ ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ವಿಷಯ ತಿಳಿಸಿ ಒಪ್ಪಿಕೊಂಡ ಮೇರೆಗೆ ನಾನು, ಚಾಸಾ-2 ರಿಂದ 6 ಬೆಳಿಗ್ಗೆ 9.00 ಗಂಟೆಗೆ ಠಾಣೆಯಿಂದ ಹೊರಟು ನಾಗರಳ್ಳಿ ಗ್ರಾಮದ ಅಂಬೇಡ್ಕರ ವೃತ್ತದ ಹತ್ತಿರ ಮುಂಜಾನೆ 9.15 ಗಂಟೆಗೆ ನಿಂತಿದ್ದಾಗ ಶಹಾಪೂರ ಕಡೆಯಿಂದ ಒಂದು ಟಿಪ್ಪರ ಬರುತ್ತಿತ್ತು ಅದನ್ನು ತಡೆದು ನಿಲ್ಲಿಸಿ ಪರಿಶೀಲಿಸಲಾಗಿ ಅದರಲ್ಲಿ ಮರಳು ಇತ್ತು. ಭಾರತ ಬೆಂಜ್ ಟಿಪ್ಪರ ನಂ.ಕೆಎ-33/ಎ-6940. ಚಾಲಕನ ಹೆಸರು ಕೇಳಲಾಗಿ ಆತನ ಹೆಸರು ನೀಲಕಂಠ ತಂದೆ ರೇವವಣಸಿದ್ದ ಎಂದು ತಿಳಿಸಿರುತ್ತಾನೆ. ಸದರಿ ವಾಹನದ ಮಾಲಿಕ 2ನೆ ಆರೋಪಿ ಎಂದು ತಿಳಿಸಿರುತ್ತಾನೆ. ಮರಳು ಸಾಗಾಟದ ಪರವಾನಿಗೆ ಕೇಳಲಾಗಿ ಆತನು ಪರವಾನಿಗೆ ಇಲ್ಲ ಎಂದು ತಿಳಿಸಿರುತ್ತಾನೆ. ಬೆಳಿಗ್ಗೆ 9.15 ರಿಂದ 10.15 ರವರೆಗೆ ಪಂಚನಾಮೆ ಜರುಗಿಸಿ ಮರಳು ತುಂಬಿದ ಟಿಪ್ಪರನ್ನು ವಶಪಡಿಸಿಕೊಳ್ಳಲಾಯಿತು. ನಂತರ ಠಾಣೆಗೆ ಬಂದು ಎಸ್.ಹೆಚ್.ಓ. ರವರಿಗೆ ವರದಿ, ಪಂಚನಾಮೆ, ಮುದ್ದೆ ಮಾಲು ಹಾಗೂ ಆರೋಪಿಯೊಂದಿಗೆ ಹಾಜರಾಗಿ ಮುಂದಿನ ಕ್ರಮಕ್ಕಾಗಿ ನೀಡಲಾಯಿತು. ಈಗ ನಾನು ಪಂಚನಾಮೆಯನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಪಂಚನಾಮೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ವರದಿಯನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯ ವರದಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-2 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರು ಗೈರು ಹಾಜರಿದ್ದು ಅವರ ಗುರುತಿಸುವಿಕೆ ಬಗ್ಗೆ ಆರೋಪಿತರ ಪರ ವಕೀಲರು ತಕರಾರು ಇಲ್ಲವೆಂದು ತಿಳಿಸಿರುತ್ತಾರೆ. ಈಗ ನಾನು 04 ಪೋಟೊಗಳನ್ನು ನೋಡುತ್ತಿದ್ದು

ಅವುಗಳಲ್ಲಿ ಕಾಣುತ್ತಿರುವ ಟಿಪ್ಪರನ್ನು ಆ ದಿನ ನಾವು ವಶಪಡಿಸಿಕೊಂಡೆವು. ಸದರಿ ಪೋಟೋಗಳನ್ನು ನಿಪಿ-3 ರಿಂದ 6 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ

ಪಂಚರನ್ನು ಚಾಸಾ-5 ರವರು ಕರೆದುಕೊಂಡು ಬಂದಿರುತ್ತಾರೆ. ಪಂಚರು ಒಮ್ಮೆಲೆ ಠಾಣೆಗೆ ಹಾಜರಾಗಿರುತ್ತಾರೆ. ನಿಪಿ-3 ರಿಂದ 6 ರ ಭಾವಚಿತ್ರಗಳಲ್ಲಿ ಮರಳು ಕಾಣುತ್ತಿಲ್ಲ ಎಂದರೆ ಸರಿ. ಚಾಸಾ-2 ಮತ್ತು 3 ರವರು ಹಲವಾರು ಪ್ರಕರಣಗಳಲ್ಲಿ ಪಂಚರಾಗಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ 25.05.2019 ರಂದು ಬೆಳಿಗ್ಗೆ 8.15 ಗಂಟೆಗೆ ನಾನು ಠಾಣೆಯಲ್ಲಿದ್ದಾಗ ಶಹಾಪೂರ ಕಡೆಯಿಂದ ನಾಗರಾಣಿ ಕಡೆಗೆ ಅಕ್ರಮವಾಗಿ ಟಿಪ್ಪರನಲ್ಲಿ ಮರಳು ಸಾಗಾಟ ಮಾಡುತ್ತಿದ್ದಾರೆ ಎಂದು ತುಂಬುತ್ತಿದ್ದಾರೆ ಎಂದು ಮಾಹಿತಿ ಬಂದಿದ್ದು ಸದರಿ ಮಾಹಿತಿಯನ್ನು ಸಿಬ್ಬಂದಿಗೆ ತಿಳಿಸಿ ಪಂಚರನ್ನಾಗಿ ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ವಿಷಯ ತಿಳಿಸಿ ಒಪ್ಪಿಕೊಂಡ ಮೇರೆಗೆ ನಾನು, ಚಾಸಾ-2 ರಿಂದ 6 ಬೆಳಿಗ್ಗೆ 9.00 ಗಂಟೆಗೆ ಠಾಣೆಯಿಂದ ಹೊರಟು ನಾಗರಳ್ಳಿ ಗ್ರಾಮದ ಅಂಬೇಡ್ಕರ ವೃತ್ತದ ಹತ್ತಿರ ಮುಂಜಾನೆ 9.15 ಗಂಟೆಗೆ ನಿಂತಿದ್ದಾಗ ಶಹಾಪೂರ ಕಡೆಯಿಂದ ಒಂದು ಟಿಪ್ಪರ ಬರುತ್ತಿತ್ತು ಅದನ್ನು ತಡೆದು ನಿಲ್ಲಿಸಿ ಪರಿಶೀಲಿಸಲಾಗಿ ಅದರಲ್ಲಿ ಮರಳು ಇತ್ತು ಅದರ ನಂ.ಕೆಎ-33/ಎ-6940 ಇದ್ದು ಚಾಲಕನ ಹೆಸರು ಕೇಳಲಾಗಿ ಆತನ ಹೆಸರು ನೀಲಕಂಠ ತಂದೆ ರೇವವಣಸಿದ್ದ ಎಂದು ತಿಳಿಸಿದ್ದು ಆತನಿಗೆ ಪರವಾನಿಗೆ ಕೇಳಲಾಗಿ ಆತನು ಪರವಾನಿಗೆ ಇಲ್ಲ ಎಂದು ತಿಳಿಸಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಬೆಳಿಗ್ಗೆ 9.15 ರಿಂದ 10.15 ರವರೆಗೆ ಪಂಚನಾಮೆ ಜರುಗಿಸಿ ಮರಳು ತುಂಬಿದ ಟಿಪ್ಪರನ್ನು ವಶಪಡಿಸಿಕೊಳ್ಳಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಠಾಣೆಗೆ ಬಂದು ಎಸ್.ಹೆಚ್.ಓ. ರವರಿಗೆ ವರದಿ, ಪಂಚನಾಮೆ, ಮುದ್ದೆ ಮಾಲು ಹಾಗೂ ಆರೋಪಿಯೊಂದಿಗೆ ಹಾಜರಾಗಿ ಮುಂದಿನ ಕ್ರಮಕ್ಕಾಗಿ ನೀಡಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾವು ಪಂಚರನ್ನು ಕರೆದುಕೊಂಡು ಹೋಗಿ ದಾಳಿ ಮಾಡಿದ್ದೇವೆ ಎಂದು ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಲ್ಲ. ನಾವು ಸ್ಥಳದಲ್ಲಿ ಪಂಚನಾಮೆ ಜರುಗಿಸಿದ್ದೇವೆ ಎಂದು ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೆ ಯಾವುದೇ ಸಂಬಂದ, ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪಿರ್ಯಾಧಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ